7) ಸಿಬ್ಬಂದಿ		167.26
8) ಡಿ.ಆರ್.ಸಿ.ಎ.	(-)	4.00
	ಒಟ್ಟು	800.00

3) 1995-96ನೇ ಸಾಲಿಗೆ ತುಂಗಾ ಮೇಲ್ದಂಡೆ ಯೋಜನೆಗೆ ರೂ.750.00 ಲಕ್ಷಗಳ ಅನುದಾನ ನಿಗದಿಗೊಳಿಸಲಾಗಿತ್ತು.

4) 1995-96ನೇ ಸಾಲಿನಲ್ಲಿ ಯೋಜನೆಗೆ ಕೆಳಕಂಡಂತೆ ಹಣ ಖರ್ಚು ಮಾಡಲಾಗಿದೆ:-

(ರೂ.ಲಕ್ಷಗಳಲ್ಲಿ)

1) ಸಿಬ್ಬಂದಿ ವೆಚ್ಚ		147.56
2) ಆಣೆಕಟ್ಟೆ ಮತ್ತು ಜಲಾಶಯ		12.72
3) ಕಾಲುವೆ		147.60
4) ರಸ್ತೆ		0.63
5) ಯಂತ್ರ ಮತ್ತು ಸಾಮಗ್ರಿ		16.64
6) ಕಟ್ಟಡಗಳು		103.84
7) ಅಮಾನತುಗಳು	(-)	70.12
	ಒಟ್ಟು	358.87

ವಿಷಯ:- ವಿದ್ಯುತ್ ಉತ್ಪಾದನೆ ಹಾಗೂ ಬಳಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 73(145)

ಶ್ರೀ ಯು.ಬಿ.ಬಣಕಾರ್:- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಈಗ ಉತ್ಪಾದನೆ ಆಗುತ್ತಿರುವ ವಿದ್ಯುತ್ ಮೆಗಾವ್ಯಾಟ್ಸ್ ಎಷ್ಟು?

ಆ) ಬಳಕೆಗೆ ಬೇಕಾಗಿರುವ ವಿದ್ಯುತ್ ಮೆಗಾವಾಟ್ಸ್ ಪ್ರಮಾಣವೆಷ್ಟು?

ಶ್ರೀ ಶರಣಬಸಪ್ಪ ದರ್ಶನಾಪುರ(ಇಂಧನ ರಾಜ್ಯ ಸಚಿವರು):- (ಅ) ರಾಜ್ಯದಲ್ಲಿರುವ ಉತ್ಪಾದನಾ ಕೇಂದ್ರಗಳಿಂದ ಈಗ ಸುಮಾರು 2420 ಮೆಗಾವಾಟ್ಸ್‌ನಷ್ಟು ವಿದ್ಯುತ್ತನ್ನು ಉತ್ಪಾದನೆ ಮಾಡಲಾಗುತ್ತಿದೆ. ಆದರೆ ಸ್ಥಾಪಿತ ಸಾಮರ್ಥ್ಯ 3470 ಮೆಗಾವಾಟ್ಸ್.

(ಆ) ರಾಜ್ಯದ ಪ್ರಸ್ತುತ ಅನಿರ್ಬಂಧಿತ ವಿದ್ಯುತ್ ಬೇಡಿಕೆ (ಅನ್‌ರೆಸ್ಟ್ರಿಕ್ಟೆಡ್ ಡಿಮ್ಯಾಂಡ್) ಸುಮಾರು 4000 ಮೆಗಾ ವಾಟ್ಸ್ ಎಂದು ಅಂದಾಜು ಮಾಡಲಾಗಿದೆ.

ವಿಷಯ:- ಪಡಿತರ ಚೀಟಿ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 74(146)

ಶ್ರೀ ಯು.ಬಿ.ಬಣಕಾರ್(ಹಿರೇಕೆರೂರು):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,